ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.416/2023 ,

ಚಾಸಾ– 1, ಪ್ರಾಸಾ –1

| | |
|---|---|
| ಹೆಸರು | ಹೆಚ್ . ಬಿ ಮಂಜುನಾಥ |
| ತಂದೆಯ ಹೆಸರು | ಲೇ\| ಹೆಚ್‌ಎಸ್. ಬೋರೇಗೌಡ |
| ವಯಸ್ಸು | 44 ವರ್ಷ |
| ಕೆಲಸ | ಕಂದಾಯ ನಿರೀಕ್ಷಕರು , ತಾಲೂಕು ಕಚೇರಿ, ಮೂಡಬಿದ್ರೆ |
| ವಾಸ | ಮೂಡಬಿದ್ರೆ |
| ಪ್ರಮಾಣೀಕರಿಸಿದ ದಿನಾಂಕ | 04–03–2024 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ನಾನು 2013 ರಿಂದ ಇಲ್ಲಿಯರವರೆಗೆ ತಾಲೂಕು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ಚಾಸಾ–2 ರಿಂದ ಚಾಸಾ–4 ರವರು ನಮ್ಮ ಕಚೇರಿಯ ಸಿಬ್ಬಂದಿಗಳು . ದಿಃ 06–10–2022 ರಂದು ನಾನು ಮತ್ತು ಚಾಸಾ–2 ರಿಂದ ಚಾಸಾ–4 ರವರೊಂದಿಗೆ ಹೊಸಬೆಟ್ಟು ಗ್ರಾಮದ ಸರ್ವೇ ನಂ. 198 ರಲ್ಲಿ ಆರೋಪಿತರು ಒತ್ತುವರಿ ಮಾಡಿರುತ್ತಾರೆ ಎಂದು ಚಾಸಾ–7 ರವರಿಗೆ ಡಿಂಪಲ್ ರೈ ಎನ್ನುವವರು ದೂರು ನೀಡಿದ ಮೇರೆಗೆ , ಚಾಸಾ–7 ರವರ ಆದೇಶದ ಮೇರೆಗೆ ಸರ್ವೇ ನಂ. 198 ರಲ್ಲಿ ಸರ್ಕಾರಿ ಜಾಗವನ್ನು ಅಳತೆ ಮಾಡಿ ಚಾಸಾ–7 ರವರಿಗೆ ವರದಿ ನೀಡಲು ಹೋಗಿರುತ್ತೇವೆ .

2. ನಾನು ಸ್ಥಳಕ್ಕೆ ಹೋಗಿ 2 ನೇ ಆರೋಪಿಗೆ ಕರೆ ಮಾಡಿದಾಗ ಸರ್ವೇ ನಂ. 198 ಕ್ಕೆ ಬರಲು ತಿಳಿಸಿರುತ್ತಾರೆ , ಆ ಮೇರೆಗೆ ನಾವೆಲ್ಲರೂ ಅಲ್ಲಿಗೆ ಹೋಗಿರುತ್ತೇವೆ . ಆ ಮುಂಚೆ ಅವರಿಗೆ ಸರ್ವೇ ಮಾಡುವ ಬಗ್ಗೆ ಚಾಸಾ-2 ರವರು ನೋಟೀಸನ್ನು ಆರೋಪಿತರಿಗೆ ನೀಡಿದ್ದರು . ಆ ನಂತರ ನಾನು ಆರೋಪಿತರನ್ನು ಕುರಿತು ನಾನು ಸ್ಥಳವನ್ನು ಅಳತೆ ಮಾಡಲು ಬಂದಿರುತ್ತೇವೆ , ನಿಮ್ಮ ಪಟ್ಟಾ ಜಾಗವನ್ನು ತೋರಿಸಿ ಎಂದು ಹೇಳಿರುತ್ತೇನೆ . ಆಗ ಆರೋಪಿತರು ನಮ್ಮ ಜಾಗವನ್ನು ಅಳತೆ ಮಾಡಬೇಡಿ ಬೇರೆಯವರು ಜಾಗವನ್ನು ಅಳತೆ ಮಾಡಿ ಎಂದು ತಿಳಿಸಿರುತ್ತಾರೆ .

3. ಇದು ಸರ್ಕಾರಿ ಕೆಲಸ , ಸರ್ಕಾರಿ ಕೆಲಸಕೆಕ ಅಡ್ಡಿ ಪಡಿಸಬೇಡಿ ನಿಮ್ಮ ಪಟ್ಟಾ ಜಾಗವನ್ನು ತಿಳಿಸಿ ಎಂದು ಹೇಳಿದಾಗ , ಅವರು ಅಳತೆ ಮಾಡಲು ಬಿಡಲಿಲ್ಲ . ಆಗ ಇತರರೂ ಕೂಡ ಬಂದಿರುತ್ತಾರೆ . ಆಗ ನಾನು ಆರೋಪಿತರನ್ನು ಕುರಿತು ಇವರೆಲ್ಲರನ್ನೂ ಯಾಕೆ ಕರೆದುಕೊಂಡು ಬಂದಿರುತ್ತೀರಿ ನಾನು ನಿಮಗೆ ಮಾತ್ರ ನೋಟೀಸು ನೀಡಿರುತ್ತೇನೆ ಎಂದು ಹೇಳಿರುತ್ತೇನೆ . ಆ ನಂತರ ಆರೋಪಿತರು ಮಚ್ಚು , ದೊಣ್ಣೆ ಮತ್ತು ಕಲ್ಲುಗಳನ್ನು ನನಗೆ ತೋರಿಸಿ , ಅಳತೆ ಮಾಡಬೇಡಿ ಎಂದು ತಿಳಿಸಿರುತ್ತಾರೆ. ಆ ಬಗ್ಗೆ ನಾನು ವೀಡಿಯೋ ಮಾಡಲು ಹೋದಾಗ , ಆರೋಪಿತರ ಪಕ್ಕದಲ್ಲಿ ಇದ್ದವರು ಯಾರೋ ಮಚ್ಚನ್ನು ಎಸೆದಿರುತ್ತಾರೆ . ಆಗ ನಾನು ಮತ್ತಷ್ಟು ಹಲ್ಲೆ ಮಾಡುವುದು ಬೇಡೆ ಎಂದು ನೆಲದಲ್ಲಿ ಬಿದ್ದ ಮಚ್ಚನ್ನು ತೆಗೆದುಕೊಂಡಿರುತ್ತೇನೆ . ಸದರಿ ವಿಚಾರವನ್ನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿದಾಗ , ಪೊಲೀಸರ ರಕ್ಷಣೆ ಇಲ್ಲದ ಕಾರಣ ನೀವು ಸರ್ವೇ ಮಾಡುವುದು ಬೇಡೆ ವಾಪಸ್ಸು ಬನ್ನಿ ಎಂದು ಕರೆದಿರುತ್ತಾರೆ . ಸದರಿ ಘಟನೆಯು ಬೆಳಿಗ್ಗೆ ಸುಮಾರು 11-00 ಗಂಟೆಗೆ ನಡೆದಿರುತ್ತದೆ .

4. 1ನೇ ಆರೋಪಿಯು ಒಂದು ಕಲ್ಲನ್ನು ತೆಗೆದುಕೊಂಡು ಅವರ ಹಣೆಗೆ ಅವರೇ ಹೊಡೆದುಕೊಂಡು , ನೀವೆಲ್ಲ ನನ್ನ ಮೇಲೆ ಹಲ್ಲೆ ಮಾಡಲು ಬಂದಿರುತ್ತೀರಿ , ನಿಮ್ಮ ಮೇಲೆ ನಾನು ಕೇಸು ದಾಖಲು ಮಾಡುತ್ತೇನೆ ಎಂದು ಹೇಳಿರುತ್ತಾರೆ . ನಂತರ ನಾನು ನನ್ನ ಮೇಲಾಧಿಕಾರಿಯವರ ಆದೇಶದಂತೆ ವಾಪಸ್ಸು ಬಂದಿರುತ್ತೇನೆ . ನಂತರ ಮಾಹಿತಿಯನ್ನು ಚಾಸಾ-7 ರವರಿಗೆ ತಿಳಿಸಿ , ಅವರ ಅನುಮತಿಯನ್ನು ಪಡೆದು ಅದೇ ದಿನ ಸಂಜೆ 7-00 ಗಂಟೆಗೆ ದಾಖಲು ಮಾಡಿರುತ್ತೇನೆ . ಸದರಿ ದೂರನ್ನು ನೋಡುತ್ತಿದ್ದು , ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು . ಈ ಘಟನೆಯಿಂದಾಗಿ ನನಗೆ ಆಘಾತವಾಗಿ , ಹೆದರಿಕೆಯುಂಟಾಗಿರುತ್ತದೆ ಮತ್ತು ಗಾಭರಿಯುಂಟಾಗಿರುತ್ತದೆ .

5. ಅದೇ ದಿನ ಘಟನೆಯ ಬಗ್ಗೆ ವಿಡಿಯೋ ಮಾಡಿದಂತಹ ಪೆನ್ ಡ್ರೈವ್‌ವನ್ನು ಪೊಲೀಸರಿಗೆ ನೀಡಿರುತ್ತೇನೆ . ಸದರಿ ಮಹಜರನ್ನು ಸಂಜೆ 7-00 ರಿಂದ 7-30 ಗಂಟೆಯವರೆಗೆ ಮಾಡಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ-2 ರಿಂದ ಚಾಸಾ-4 ರವರು ಹಾಜರಿದ್ದರು . ಸದರಿ ಮಹಜರನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು . ನ್ಯಾಯಾಲಯದ ಮುಂದೆ ಇರುವ ದೊಣ್ಣೆ, ಕತ್ತಿ ಮತ್ತು ಕಲ್ಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ಮು,ಮಾ-1 ರಿಂದ ಮು.ಮಾ-3 ಎಂದು ಗುರುತಿಸಲಾಯಿತು . ಸದರಿ ಪೆನ್‌ಡ್ರೈವ್ ವನ್ನು ನೋಡುತ್ತಿದ್ದು , ಅದನ್ನು ಮು. ಮಾ-4 ಎಂದು ಗುರುತಿಸಲಾಯಿತು .

6. ಮರುದಿನ ಸ್ಥಳ ಮಹಜರಿಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು , ಪೊಲೀಸರಿಗೆ ನಾನು ಘಟನಾ ಸ್ಥಳವನ್ನು ತೋರಿಸಿಕೊಟ್ಟಿರುತ್ತೇನೆ . ಸದರಿ ಸಮಯದಲ್ಲಿ ನಾನು , ಚಾಸಾ-5 ಹಾಗೂ ರವಿ ಎನ್ನುವವರು ಇದ್ದರು . ಸದರಿ ಮಹಜರನ್ನು ಬೆಳಿಗ್ಗೆ 11-00 ಗಂಟೆಗೆ

ಜರುಗಿಸಿರುತ್ತಾರೆ , ಸದರಿ ಮಹಜರನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ-3 ಎಂದು , ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು . ಸದರಿ ಸಮಯದಲ್ಲಿ ಮು.ಮಾ-1 ರಿಂದ 3 ನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ .

7. ಚಾಸಾ-7 ರವರು ಸ್ಥ,ಳವನ್ನು ಸರ್ವೆ ಮಾಡಲು ನೀಡಿದಂತಹ ಆದೇಶವನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ-4 ಎಂದು ಗುರುತಿಸಲಾಯಿತು . ಸ್ಥಳವನ್ನು ಸರ್ವೆ ಮಾಡುವ ಸಲುವಾಗಿ ಆರೋಪಿತರಿಗೆ ನೀಡಿ ನೋಟೀಸನ್ನು ನೋಡುತ್ತಿದ್ದು , ಅದನ್ನು 5 ಎಂದು , ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಪೊಲೀಸರಿಗೆ ಈ ಬಗ್ಗೆ ಮರುಹೇಳಿಕೆ ಯನ್ನು ನೀಡಿರುತ್ತೇನೆ . ಕಲಂ 307 ಕ್ಕೆ ಸಾಕಷ್ಟು ಸಾಕ್ಷ್ಯಧಾರಗಳು ಇಲ್ಲದೆ ಇರುವುದರಿಂದ ಹಾಗೂ ಆರೋಪಿತರು ಶಿಕ್ಷೆಯಿಂದ ಪಾರಾಗಬಾರದೆಂದು ಮರುಹೇಳಿಕೆಯನ್ನು ನೀಡಿರುತ್ತೇನೆ . ಆ ದಿನ ನಾನು ನನ್ನ ಕಚೇರಿಯ ಇತರೆ ಕೆಲಸಗಳನ್ನು ನಿರ್ವಹಿಸಿರುತ್ತೇನೆ . ಆ ದಿನ ಸ್ಥಳ ಮಹಜರಿನಲ್ಲಿ ತೆಗೆದ ಫೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ನಿಪಿ-6 ಮತ್ತು ನಿಪಿ-7 ಎಂದು ಗುರುತಿಸಲಾಯಿತು .

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

ನಿಪಿ-2 ರ ಮಹಜರನ್ನು ಮಾಡುವಾಗ ಅನಿಲ್ ಕುಮಾರ್ ಮತ್ತು ಶ್ರೀನಿವಾಸ್ ಎಂಬುವವರ ಸಮಕ್ಷಮದಲ್ಲಿ ಮು.ಮಾ-4 ನ್ನು ನೀಡಿರುತ್ತೇನೆ ಎಂದರೆ ಹೌದು . ನಿಪಿ-3 ನ್ನು ಮಾಡುವ ಸಮಯದಲ್ಲಿ ಚಾಸಾ-5 ರವರ ಜೊತೆ ಚಾಸಾ-6 ರವರು ಸಹ ಹಾಜರಿದ್ದರು ಎಂದರೆ ಸರಿ .

ಸದರಿ ಮಹಜರನ್ನು 9-30 ಗಂಟೆಯಿಂದ 10-15 ರವರೆ ಮಾಡಿರುತ್ತಾರೆ ಎಂದರೆ ಸರಿ .

ಪಾಟೀಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಎಸ್.ಎಸ್.ಡಿ, ರವರಿಂದಃ

1. ಡಿಂಪಲ್ ರೈ ರವರು ಎಲ್ಲಿ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ . ಸದರಿಯವರು ಮೂಡಬಿದ್ರೆ ತಾಲೂಕಿನ ನಿವಾಸಿಯಲ್ಲ ಎನ್ನುವ ಮಾಹಿತಿ ನನಗೆ ಗೊತ್ತಿಲ್ಲ . ಸರ್ಕಾರಿ ಜಾಗವಾದ ಸರ್ವೇ ನಂ. 198 ರ ಹತ್ತಿರದಲ್ಲಿ ಕಿಶೋರ್ ಆಳ್ವಾ ರವರಿಗೆ ಸಂಬಂಧಪಟ್ಟ ಸುಮಾರು 30 ಎಕರೆ ಜಮೀನು ಇದೆ ಎನ್ನುವ ಬಗ್ಗೆ ನನಗೆ ನನಗೆ ಗೊತ್ತಿಲ್ಲ . ಕಿಶೋರ್ ಆಳ್ವಾ ಮತ್ತು ಅವರ ಸಂಬಂಧಿಕರ ಜಮೀನಿಗೆ ನಾನು ಎಂದಿಗೂ ಭೇಟಿ ನೀಡಿರುವುದಿಲ್ಲ . ಡಿಂಪಲ್ ರೈ ರವರು ಕಿಶೋರ್ ಆಳ್ವಾ ರವರ ಸಹೋರಿ ಎನ್ನುವ ವಿಚಾರ ನನಗಗೆ ಗೊತ್ತಿಲ್ಲ . ಕಿಶೋರ್ ಆಳ್ವಾ ಅದಾನಿ ಪವರ್ ಸಂಸ್ಥೆಯ ಒಂದು ದೊಡ್ಡ ಹುದ್ದೆಯಲ್ಲಿ ಇದ್ದಾರೆ ಎಂಬುದು ಗೊತ್ತಾ ಎಂದರೆ ಬೇರೆಯವರ ಪ್ರೋಟೋಕಾಲ್ ಡ್ಯೂಟಿಗೆ ಹೋದಾಗ ಏರ್ ಪೋರ್ಟ್ ನಲ್ಲಿ ಅವರನ್ನು ನೋಡಿ ಪರಿಚಯವಿದ್ದಾರೆ .

2. ದೂರನ್ನು ಬೆರಳಚ್ಚು ಮಾಡುವಾಗ ಸಂಜೆ 5-30 ರಿಂದ 6-00 ಗಂಟೆಯಾಗಿರುತ್ತದೆ , ಸದರಿ ದೂರನ್ನು ನಮ್ಮ ಕಚೇರಿಯಲ್ಲಿ ನಾನೇ ಸ್ವತಃ ಬೆರಳಚ್ಚು ಮಾಡಿರುತ್ತೇನೆ . ಆರೋಪಿತರ ಜೊತೆ ಒಬ್ಬ ವ್ಯಕ್ತಿ ಇದ್ದು , ಆತನ ಕೈಯಲ್ಲಿ ಕತ್ತಿ ಇದ್ದು , ಅದನ್ನು ನಮ್ಮ ಕಡೆಗೆ ಬಿಸಾಡಿರುತ್ತಾನೆ ಎಂದು ಮತ್ತು ಆ ಕತ್ತಿಯನ್ನು ನಾನು ಎತ್ತುಕೊಂಡಿರುತ್ತೇನೆ ಎಂದು ಹೇಳಿರುವ ವಿಚಾರ ದೂರಿನಲ್ಲಿ ನಮೂದು ಮಾಡಿರುತ್ತೇನೋ ಇಲ್ಲವೊ ನನಗೆ ನೆನಪಿಲ್ಲ . ಸದರಿ ದೂರನ್ನು ಈಗ ನೋಡಿದಾಗ ಆ ವಿಚಾರ ಅದರಲ್ಲಿ ನಮೂದು ಇಲ್ಲ . ಪೊಲೀಸರಿಗೆ ನಾನು ಮರುಹೇಳಿಕೆಯನ್ನು ನೀಡಿದ್ದು , ಸದರಿ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿರುವುದಿಲ್ಲ . ಈ ವಿಚಾರವನ್ನು ಪ್ರಥಮವಾಗಿ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ .

3. ಆ ಕತ್ತಿಯನ್ನು ನಾನು ತೆಗೆದುಕೊಂಡು ಹೋಗಿ ನಾನು ಕಚೇರಿಯಲ್ಲಿ ಇಟ್ಟುಕೊಂಡಿರುತ್ತೇನೆ . ದೂರು ನೀಡವಾಗಲೇ ಸದರಿ ಕತ್ತಿಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ . ಕತ್ತಿಯನ್ನು ಪೊಲೀಸ್ ಠಾಣೆಯಲ್ಲಿ ಕೊಟ್ಟ ಬಗ್ಗೆ ಪೊಲೀಸ್‌ಸರು ಠಾಣೆಯಲ್ಲಿ ಮಹಜರ್ ಮಾಡಿರುತ್ತಾರಾ ಎಂದರೆ ನೆನಪಿಲ್ಲ . ನಾನು ಪೆನ್ ಡ್ರೈವ್ ಮತ್ತು ಕತ್ತಿಯನ್ನು ಒಟ್ಟಿಗೆ ಪೊಲೀಸರಿಗೆ ಕೊಟ್ಟಿರುತ್ತೇನೆ .

4. ಸ್ಥಳ ಮಹಜರನ್ನು ನಾನು ಓದಿರುತ್ತೇನೆ . ಇಡಿ ಘಟನೇಯನ್ನು ನಾನು ವಿಡಿಯೋ ರೆಕಾರ್ಡ್ ಮಾಡಿರುತ್ತೇನೆ . ಕಲ್ಲನ್ನು ಹಿಡಿದು ಯಾರು ಬೆದರಿಸಿರುತ್ತಾರೆ ಎಂದು ಪಿರ್ಯಾದಿನಲ್ಲಿ ಆಗಲೀ ಅಥವಾ ನನ್ನ ಮರುಹೇಳಿಕೆಯಲ್ಲಿ ಆಗಲೀ ಹೇಳಿರುವುದಿಲ್ಲ . ಇಡಿ ವಿಡಿಯೋ ಚಿತ್ರಿಕರಣದಲ್ಲಿ ಆರೋಪಿತರ ಕೈಯಲ್ಲಿ ಮಚ್ಚು ಮತ್ತು ಕಲ್ಲು ಕಂಡು ಬಂದಿರುತ್ತದಾ ಎಂದರೆ ವಿಡಿಯೋ ಮಾಡಲು ಮೊಬೈಲನ್ನು ತಿರುಗಿಸಿದಾಗ ಆರೋಪಿತರು ಅದನ್ನು ಎಸೆದಿರುತ್ತಾರೆ . ಅಲ್ಲಿ ಬಿದಿದ್ದಂತಹ ದೊಣ್ಣೆಯನ್ನು ತೆಗೆದುಕೊಂಡಿರಾ ಎಂದರೆ ನಾನು ತೆಗೆದುಕೊಂಡಿರುವುದಿಲ್ಲ .

5. ದುರ್ಗಾ ದಾಸ್ ಶೆಟ್ಟಿ ಎನ್ನುವ ವ್ಯಕ್ತಿ ನಾನು ಅಳತೆಗೆ ಹೋಗುವ ಸಮಯದಲ್ಲಿ ಇದ್ದರಾ ಎಂದರೆ ಇಲ್ಲ . ದುರ್ಗಾ ದಾಸ್ ಶೆಟ್ಟಿ ಎನ್ನುವವರ ಪರಿಚಯ ಇದೆಯಾ ಎಂದರೆ ಭಾವಚಿತ್ರ ನೋಡಿದರೆ ಹೇಳಬಲ್ಲೆ . ಜಾಗ ಅಳತೆ ಮಾಡಲು ಹೋಗುವಾಗ ಡಿಂಪಲ್ ರೈ ರವರು ಇರಲಿಲ್ಲ . ಸದರಿಯವರನ್ನು ಸ್ಥಳಕ್ಕೆ ಕರೆದಿರುತ್ತೀರಾ ಎಂದರೆ ಇಲ್ಲ . ನಮಗೆ ಸರ್ಕಾರಿ ಜಾಗವಾದ ಸರ್ವೇ ನಂ. 198 ನ್ನು ಅಳತೆ ಮಾಡಲು ಆದೇಶವಾಗಿರುತ್ತದೆ . ನಮಗೆ ಬೇರೆಯವರ ಪಟ್ಟಾ ಜಾಗವನ್ನು ಅಳತೆ ಮಾಡಲು ಆದೇಶವಾಗಿರುವುದಿಲ್ಲ .

6. ನಾನು ಕತ್ತಿಯನ್ನು ತೆಗೆದುಕೊಂಡು ಹೋಗುವ ಮುಂಚೆಯೇ 1 ನೇ ಆರೋಪಿ ಕಲ್ಲಿನಿಂದ ಜಜ್ಜಿಕೊಂಡಿರುತ್ತಾರೆ . 3 ನೇ ಆರೋಪಿಗೆ ಸುಮಾರು 80 ವರ್ಷ ಪ್ರಾಯವಾಗಿರುತ್ತದೆ. 2 ನೇ ಆರೋಪಿಗೆ ಸುಮಾರು 75 ವರ್ಷ ಪ್ರಾಯವಾಗಿರುತ್ತದೆ . ನಿಪಿ-1 ಕಿಶೋರ್ ಆಳ್ವಾರವರ ವಕೀಲರ ಕಚೇರಿಯಲ್ಲಿ ಬೆರಳಚ್ಚು ಅಗಿರುತ್ತದೆ ಎಂದರೆ ಸರಿಯಲ್ಲ . ಕಿಶೋರ್ ಆಳ್ವಾ ರವರು ಆರೋಪಿತರು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದರು ಚಾಸಾ-7 ರವರ ಕಚೇರಿಗೆ ದೂರು ನೀಡಿರುತ್ತಾರೆ .

7. ಆರೋಪಿತರು ನೀಡಿರುವ ದೂರಿನ ಬಗ್ಗೆ ಕಿಶೋರ್ ಆಳ್ವಾ ರವರು ಸರ್ಕಾರಿ ಜಮೀನನ್ನು ಅತಿಕ್ರಮ ಮಾಡಿರುತ್ತಾರೋ ಇಲ್ಲವೊ ಎನ್ನುವ ಬಗ್ಗೆ ತನಿಖೆಯನ್ನು ಮಾಡಿರುತ್ತೀರಾ ಎಂದರೆ ಹೌದು . ಕಿಶೋರ್ ಆಳ್ವಾ ರವರ ಪಟ್ಟಾ ಜಾಗವನ್ನು ಅಳತೆ ಮಾಡಿರುವುದಿಲ್ಲ . ಕಿಶೋರ್ ಆಳ್ವಾ ರವರಿಗೆ ಸ್ಥಳ ಸರ್ವೇ ಮಾಡುವ ಬಗ್ಗೆ ನಾನು ನೋಟೀಸು ನೀಡಿರುವುದಿಲ್ಲ . ಸರ್ವೇಯರ್ ನೋಟೀಸು ನೀಡಿರುತ್ತಾರೆ ಇಲ್ಲವೊ ನನಗೆ ಗೊತ್ತಿಲ್ಲ . ಆ ರೀತಿ ಅಳತೆ ಮಾಡುವ ಸಮಯದಲ್ಲಿ ಡಿಂಪಲ್ ರೈ ಅಥವಾ ಕಿಶೋರ್ ಆಳ್ವಾ ರವರು ಸ್ಥಳದಲ್ಲಿ ಇದ್ದರಾ ಎಂದರೆ ಇರಲಿಲ್ಲ . ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ . ಕಿಶೋರ್ ಆಳ್ವಾ ರವರ ಪ್ರಭಾವದಿಂದ ಅಮಯಕಾರಾದ ಆರೋಪಿತರ ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ .

8. ಈ ಪ್ರಕರಣದ ಸಲುವಾಗಿ ಮು.ಮಾ-1 ರಿಂದ ಮು.ಮಾ-4 ನ್ನು ನಾನೇ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ ಎಂದರೆ ಪೆನ್ ಡ್ರೈ ಮತ್ತು ಕತ್ತಿಯನ್ನು ನಾನು ನೀಡಿರುತ್ತೇನೆ .

ಸ್ಥಳ ಮಹಜರ್ ಮಾಡುವಾಗ ದೊಣ್ಣೆ ಮತ್ತು ಕಲ್ಲನ್ನು ಪೊಲೀಸರು ಸ್ವಾಧೀನ ಪಡಿಸಿಕೊಂಡಿರುತ್ತಾರೆ ಸ್ಥಳ ಮಹಜರಿಗೆ ಪೊಲೀಸರು ಬರಲೇ ಇಲ್ಲ ಎಂದರೆ ಸರಿಯಲ್ಲ . ಕಿಶೋರ್ ಆಳ್ವಾ ರವರ ನಿರ್ದೇಶನದ ಮೇರೆಗೆ ಸ್ಥಳ ಮಹಜರನ್ನು ಠಾಣೆಯಲ್ಲಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಮಹಜರಿಗೆ ಸಹಿಯನ್ನು ಠಾಣೆಯಲ್ಲಿಯೇ ಮಾಡಿರುತ್ತೇನೆ ಎಂದರೆ ಸರಿಯಲ್ಲ . ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಕಿಶೋರ್ ಆಳ್ವಾ ರವರ ನಿರ್ದೇಶದಂತೆ ಕಲಂ 307 ನ್ನು ಪ್ರಕರಣದಲ್ಲಿ ಸೇರಿಸಿ , ಆರೋಪಿತರ ಮೇಲೆ ದೌರ್ಜನ್ಯವೆಸಗಿರುತ್ತೇವೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ